ಉತ್ಪತ್ತಿ ಆಗಬೇಕಾಗಿದ್ದು ಅದರಲ್ಲಿ ಶೇ. 10ರಷ್ಟು ಅಂದರೆ 10 ಲಕ್ಷ ಕಾಯಿಗಳು ನಷ್ಟವಾಗಿರುವ ಸಾಧ್ಯತೆ ಇದೆ.

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮೂರು ಕಿರು ಪ್ರಯೋಗಾಲಯಗಳನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಪರೋಪಜೀವಿಗಳನ್ನು ಉತ್ಪಾದಿಸಲು ತೆಗೆದಿರುತ್ತದೆ.

ನಿಗಧಿಪಡಿಸಿದ 2.25 ಲಕ್ಷ ಪರೋಪಜೀವಿಗಳನ್ನು ಉತ್ಪಾದನೆ ಮಾಡಲು ಗುರಿ ಇದ್ದು ಈವರೆವಿಗೂ 5.79ಲಕ್ಷ ಪರೋಪಜೀವಿಗಳನ್ನು ಜೂನ್ 91ರ ಮಾಹೆಯವರೆಗೂ ಉತ್ಪಾದನೆ ಮಾಡಿ ಭಾದೆಗಳೊಳಗಾದ ರೈತರ ತೋಟಗಳಲ್ಲಿ ಬಿಡುಗಡೆ ಮಾಡಿ ಇದರ ಭಾದೆಯನ್ನು ಸಮಗ್ರ ರೀತಿಯಲ್ಲಿ ತಡೆಗಟ್ಟಲಾಗಿದೆ. ಇದಲ್ಲದೆ ತೆಂಗು ಅಭಿವೃದ್ಧಿ ಮಂಡಳಿ ಸಹಯೋಗದಿಂದ ಉಡುಪಿಯಲ್ಲಿ ಬೃಹತ್ ಪ್ರಮಾಣಾದ ಒಂದು ಪ್ರಯೋಗಾಲಯ ನಿರ್ಮಾಣ ಮುಗಿಯುವ ಹಂತದಲ್ಲಿದ್ದು ಇದರಿಂದ 10ಲಕ್ಷ ಪರೋಪಜೀವಿಗಳನ್ನು ಉತ್ಪಾದನೆ ಮಾಡುವ ಗುರಿ ಇಟ್ಟುಕೊಂಡಿದೆ. 1991-92ನೇ ಸಾಲಿನಲ್ಲಿ ರಾಜ್ಯದ 10 ಪ್ರಮುಖ ಜಿಲ್ಲೆಗಳಲ್ಲಿ ಹುಳುವಿನ ಸಮಗ್ರ ಹತೋಟಿಗಾಗಿ 30 ಲಕ್ಷ ರೂ.ಗಳ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಸಗೊಬ್ಬರಗಳ ಬೆಲೆ ಏರಿಕೆ

2240 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆ ಅತ್ಯವಶ್ಯಕವಾಗಿ ಬೇಕಾಗುವ ರಾಸಾಯನಿಕ ಮತ್ತು ರಸಗೊಬ್ಬರಗಳ ಬೆಲೆ ಏರಿಕೆಯ ಬಗ್ಗೆ ಬಂದ ಪ್ರತಿಭಟನೆಗಳನ್ನು ಸರ್ಕಾರ ಅರಿತಿದೆಯೇ?

ಆ) ಕೇಂದ್ರ ಸರ್ಕಾರ ರಸಗೊಬ್ಬರಗಳ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿರುವುದರಿಂದ ಈ ದರ ಹೆಚ್ಚಾಗಿಲ್ಲವೆ?

ಇ) ಸಬ್ಸಿಡಿ ನೀಡುವುದನ್ನು ಮುಂದುವರೆಸುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದಿದೆಯೇ?

ಈ) ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ನಿರ್ಧಾರವೇನೆಂಬುದನ್ನು ರಾಜ್ಯ ಸರ್ಕಾರ ಮನಗಂಡಿದೆಯೇ?

ಉ) ರಸಗೊಬ್ಬರಗಳ ಬೆಲೆಯನ್ನು ಇಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು)

ಅ) ಹೌದು

ಆ) ಹೌದು

ಇ) ಹೌದು, ರಸಗೊಬ್ಬರಗಳ ಬೆಲೆಯನ್ನು ಇಳಿಸುವುದು ಮತ್ತು ದ್ವಂದ್ವ ಬೆಲೆ ನೀತಿಯನ್ನು ಕೈಬಿಡುವಂತೆ ಕೇಂದ್ರವನ್ನು ಕೋರಲಾಗಿದೆ.

ಈ) ಇನ್ನೂ ಇಲ್ಲ

ಈ) ರಸಗೊಬ್ಬರಗಳ ಬೆಲೆಯನ್ನು ನಿಗದಿಪಡಿಸುವ ಅಧಿಕಾರ ಕೇಂದ್ರ ಸರ್ಕಾರದ ಕಾರ್ಯವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಈ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಲಾಗಿದೆ.

ರಾಜ್ಯದಲ್ಲಿ ಬಿತ್ತನೆ ಬೀಜಗಳ ಕೊರತೆ

2226 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿತ್ತನೆ ಬೀಜಗಳ ಕೊರತೆ ಇದೆಯೇ?

ಆ) ಇದ್ದಲ್ಲಿ ಯಾವ ಯಾವ ಬಿತ್ತನೆ ಬೀಜಗಳ ಕೊರತೆ ಎಷ್ಟೆಷ್ಟು ಪ್ರಮಾಣದಲ್ಲಿದೆ?

ಈ) ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ ಹೈಬ್ರಿಡ್ ಸೂರ್ಯಕಾಂತಿ ಬೀಜಗಳನ್ನು ಹೊರತುಪಡಿಸಿ ಇತರೆ ಕೃಷಿ ಬೆಳೆಗಳ ಬೀಜಗಳ ಕೊರತೆ ರಾಜ್ಯದಲ್ಲಿ ಕಂಡು ಬಂದಿರುವುದಿಲ್ಲ.

ಆ) ಮುಂಗಾರು ಹಂಗಾಮಿನಲ್ಲಿ ಸೂರ್ಯಕಾಂತಿ ಬೀಜಗಳ ಬೇಡಿಕೆ ಮತ್ತು ವಿತರಣೆ ಈ ಕೆಳಕಂಡಂತಿದೆ.

ತಳಿ	ಬೇಡಿಕೆ	ವಿತರಣೆ
	(ಕ್ವಿಂಟಾಲ್‌ಗಳಲ್ಲಿ)	
1) ಹೈಬ್ರಿಡ್	5300	2075
2) ಇತರೆ	2120	8745
ಒಟ್ಟು	**7420**	**10820**

ಇ) ಸೂರ್ಯಕಾಂತಿ ಹೈಬ್ರಿಡ್ ಬೀಜಗಳ ಕೊರತೆಯನ್ನು ನಿವಾರಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಬೀಜೋತ್ಪಾದನಾ ಹಾಗೂ ವಿತರಣಾ ಸಂಸ್ಥೆಗಳಿಗೆ ಹೈಬ್ರಿಡ್ ತಳಿಯ ಬೀಜಗಳನ್ನು ತಂದು ಮಾರಾಟ ಮಾಡಲು ತಿಳಿಸಲಾಗಿದೆ.
2) ಹೈಬ್ರಿಡ್ ಬೀಜಗಳ ಬದಲಾಗಿ, ಮಾರ್ಡೀನ್ ತಳಿಯನ್ನು ಸಾಕಷ್ಟು ಪ್ರಮಾಣದಲ್ಲಿ ವಿತರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
3) ಒಟ್ಟಾರೆ ಬೇಡಿಕೆಯನ್ನು ಪೂರೈಸಲು ರೈತರಲ್ಲಿ ದೊರೆಯುವ ಉತ್ತಮ ಗುಣಮಟ್ಟದ (ತಳಿಯ) ಮೂರು ಮತ್ತು ನಾಲ್ಕನೆ ಹಂತದ ಬೀಜಗಳನ್ನು ಗುರುತಿಸಿ ವಿತರಿಸಲು ವ್ಯವಸ್ಥೆ ಮಾಡಲಾಗಿದೆ.

ಕೇಂದ್ರದಿಂದ ರಾಜ್ಯಕ್ಕೆ ನೀಡಲಾದ ಗೊಬ್ಬರದ ಪ್ರಮಾಣ

2227 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ನೀಡಲಾದ ಗೊಬ್ಬರದ ಪ್ರಮಾಣವೆಷ್ಟು?

ಆ) ಇದರಲ್ಲಿ ರಾಜ್ಯ ಸರ್ಕಾರವು ಎಷ್ಟು ಪ್ರಮಾಣದ ಗೊಬ್ಬರವನ್ನು ಎತ್ತುವಳಿ ಮಾಡಿದೆ?

ಇ) ರಾಜ್ಯದಲ್ಲಿ ರೈತರುಗಳು ಗೊಬ್ಬರದ ಅಭಾವವನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರವು ಗೊಬ್ಬರದ ಸಮರ್ಪಕ ವಿತರಣೆ ಹಾಗೂ ಕಾಳಸಂತೆಯಲ್ಲಿ ಗೊಬ್ಬರದ ಮಾರಾಟವನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ಈ ಮುಂಗಾರಿಗೆ (ಸೆಪ್ಟೆಂಬರ್‌ವರೆಗೆ) 6.24 ಲಕ್ಷ ಟನ್ ಎನ್.ಪಿ.ಕೆ.ಯನ್ನು (12.05 ಲಕ್ಷ ಟನ್ ವಿವಿಧ ಗೊಬ್ಬರಗಳು) ಹಂಚಿಕೆಗಾಗಿ ಅಲಾಟ್ ಮಾಡಲಾಗಿದೆ.